## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಮುರಳೀಧರ ವಿ. ಹಿಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಸೋಮವಾರಪೇಟೆ ಹಾಗೂ ಶ್ರೀ ಗಣಪತಿ ಕೆ.ಪಿ., ಗ್ರಾಮ ಪಂಚಾಯತ್ ಕಾರ್ಯದರ್ಶಿ, ಶಾಂತಳ್ಳಿ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ – ಅಂತಿಮ ದಂಡನಾದೇಶ.

**ಓದಲಾಗಿದೆ:-**

1. ನಿಬಂಧಕರು, ಕರ್ನಾಟಕ ಲೋಕಯುಕ್ತ, ಬೆಂಗಳೂರು ಇವರ ಅ.ಸ.ಪತ್ರ ಸಂಖ್ಯೆ: ಲೋಕ್/ಐಎನ್‌ಕ್ಯೂ/14/499/2014/ಎಆರ್‌ಇ-10
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 46 ಇಎನ್‌ಕ್ಯೂ 2013, ದಿನಾಂಕ: 28.12.2013.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ ಪತ್ರ ದಿನಾಂಕ: 06.10.2016
4. ಆಪಾದಿತರಿಗೆ ಜಾರಿ ಮಾಡಿರುವ 2ನೇ ಕಾರಣ ಕೇಳುವ ನೋಟಿಸ್ ದಿನಾಂಕ:18.11.2016
5. ಶ್ರೀ ವಿ.ಮುರುಳೀಧರ, ಕಿರಿಯ ಇಂಜಿನಿಯರ್ ಹಾಗೂ ಶ್ರೀ ಕೆ.ಜಿ.ಗಣಪತಿ, ಕಾರ್ಯದರ್ಶಿ ಇವರುಗಳು ಸಲ್ಲಿಸಿರುವ ಲಿಖಿತ ಹೇಳಿಕೆಯ ದಿನಾಂಕ 07.12.2016 ಮತ್ತು 09.12.2016.

*****

**ಪ್ರಸ್ತಾವನೆ:**

ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿ ಶ್ರೀ ಮಾಚಯ್ಯ, ಮಾಜಿ ಸೈನಿಕ ಎಂಬುವವರು ಸಲ್ಲಿಸಿದ ದೂರಿನ ಬಗ್ಗೆ ತನಿಖೆ ಕೈಗೊಂಡಿದ್ದು, ತನಿಖಾ ವರದಿಯಲ್ಲಿ ಶ್ರೀ ಕೆ.ಪಿ.ಗಣಪತಿ, ಅಂದಿನ ಕಾರ್ಯದರ್ಶಿ, ಶಾಂತಳ್ಳಿ ಗ್ರಾಮ ಪಂಚಾಯತ್ ಹಾಗೂ ಶ್ರೀ ವಿ.ಮುರಳಿಧರ್, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸೋಮವಾರಪೇಟೆ ರವರುಗಳು ಶಾಂತಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಬ್ಬಿಮಠ ಬಾಚಳ್ಳಿ ಗ್ರಾಮದ ಅಂಗನವಾಡಿ ಕಟ್ಟಡ ದುರಸ್ತಿ ಕಾಮಗಾರಿಯಲ್ಲಿ ಅವ್ಯವಹಾರ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಸದರಿಯವರುಗಳ ವಿರುದ್ದದ ಆರೋಪಗಳ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ತಮಗೆ ವಹಿಸುವಂತೆ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದರು. ಸರ್ಕಾರವು ಸದರಿ ವರದಿಯನ್ನು ಪರಿಶೀಲಿಸಿ ಮೇಲ್ಕಂಡ ಆಪಾದಿತರುಗಳು ಶಾಂತಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಬ್ಬಿಮಠ ಬಾಚಳ್ಳಿ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ದುರಸ್ತಿ ಕಾಮಗಾರಿಯಲ್ಲಿ ಅವ್ಯವಹಾರ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ, ಸದರಿ ಆರೋಪಗಳ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು-1957ರ ನಿಯಮ 11 ರಡಿ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14ಎ ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

--

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮಾಂಕ (3)ರ ದಿನಾಂಕ:06.10.2016 ರ ಪತ್ರದೊಂದಿಗೆ ವಿಚಾರಣಾ ವರದಿ, ವಿಚಾರಣಾ ವರದಿ ಕುರಿತಾಗಿ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು ಇತರೆ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸರ್ಕಾರವು ವಿಚಾರಣಾ ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ವಿಚಾರಣಾಧಿಕಾರಿಗಳು ಆಪಾದಿತರುಗಳ ವಿರುದ್ಧದ ಆರೋಪಗಳ ಕುರಿತು ಶಿಸ್ತು ಪ್ರಾಧಿಕಾರದ ಪರವಾಗಿ 2 ಸಾಕ್ಷಿ ಹಾಗೂ ಹಲವಾರು ದಾಖಲೆಗಳು ಹಾಗೂ ಆಪಾದಿತರ ಪರವಾಗಿ ಆಪಾದಿತರ ಹೇಳಿಕೆ, 2 ಸಾಕ್ಷಿ ಹಾಗೂ ಹಲವು ದಾಖಲೆಗಳನ್ನು ಪರಿಶೀಲಿಸಿ, ಅಂತಿಮವಾಗಿ ಸಲ್ಲಿಸಿರುವ ವರದಿಯಲ್ಲಿ ಆರೋಪಿತರ ವಿರುದ್ಧದ ಆರೋಪಗಳು ಸಾಭೀತಾಗಿರುತ್ತವೆ ಎಂದು ನಿರ್ಣಯಿಸಿ ವರದಿ ಸಲ್ಲಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾಧಿಕಾರಿಗಳು ಸಾಕ್ಷ್ಯ ಹಾಗೂ ದಾಖಲೆಗಳನ್ನು ಪರಿಗಣಿಸಿ ನಿರ್ಣಯಿಸಿರುವುದರಿಂದ ಸಾಭೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ವಿಚಾರಣಾ ವರದಿಯನ್ನು ಆಧರಿಸಿ ಮುಂದಿನ ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಸದರಿ ಆರೋಪಿತ ನೌಕರರುಗಳಾದ ಶ್ರೀ ಮುರುಳಿಧರ ವಿ, ಹಿಂದಿನ ಕಿಇರಿಯ ಇಂಜಿನಿಯರ್, ಪಂ.ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸೋಮವಾರಪೇಟೆ ಹಾಗೂ ಶ್ರೀ ಕೆ.ಪಿ.ಗಣಪತಿ, ಅಂದಿನ ಕಾರ್ಯದರ್ಶಿ, ಶಾಂತಳ್ಳಿ ಗ್ರಾಮ ಪಂಚಾಯತ್ ರವರುಗಳಿಗೆ ಮೇಲೆ ಓದಲಾದ ಕ್ರಮಾಂಕ (4) ರ ದಿನಾಂಕ: 18.11.2016ರ 2 ನೇ ಕಾರಣ ಕೇಳುವ ನೋಟಿಸ್‌ನೊಂದಿಗೆ ವಿಚಾರಣಾ ವರದಿ ಹಾಗೂ ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸು ಪತ್ರಗಳನ್ನು ಲಗತ್ತಿಸಿ ಜಾರಿ ಮಾಡಲಾಗಿತ್ತು. ಪ್ರತಿಯಾಗಿ ಸದರಿಯವರುಗಳು ಮೇಲೆ ಓದಲಾದ ಕ್ರಮಾಂಕ (5) ರ ದಿನಾಂಕ: 07.12.2016 ಮತ್ತು 09.12.2106 ರಂದು ವಿವರಣೆ ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ವಿಚಾರಣಾ ವರದಿ, ಸಾಕ್ಷಿಗಳ ಹೇಳಿಕೆಗಳು ಹಾಗೂ ಆಪಾದಿತ ಅಧಿಕಾರಿಯು ಸಲ್ಲಿಸಿರುವ ಲಿಖಿತ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಆಪಾದಿತ ನೌಕರರ ವಿರುದ್ಧ ಶಾಂತಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಬ್ಬಿಮಠ ಬಾಚಳ್ಳಿ ಅಂಗನವಾಡಿ ಕಟ್ಟಡದ ಎರಡು ಬಾಗಿಲು ಮತ್ತು ಕಿಟಕಿಗಳು ಹಾಗೂ ಇತರೆ ಕೆಲಸಗಳನ್ನು ಕಳಪೆ ಗುಣಮಟ್ಟದಿಂದ ನಿರ್ವಹಿಸಿರುವ ಬಗ್ಗೆ ಹಾಗೂ ಆಟದ ಆವರಣದ ಚರಂಡಿ ಕಾಮಗಾರಿಯ ಮಣ್ಣಿನ ಕೆಲಸವನ್ನು ಕಳಪೆ ಗುಣಮಟ್ಟದಿಂದ ನಿರ್ವಹಿಸಿ ದುರ್ನಡತೆ ಎಸಗಿರುವ ಕುರಿತು ಆರೋಪಿಸಲಾಗಿದೆ.

ಸದರಿ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಯವರು ಶಿಸ್ತು ಪ್ರಾಧಿಕಾರದ ಪರವಾಗಿ 2 ಸಾಕ್ಷಿ ಹಾಗೂ ಹಲವಾರು ದಾಖಲೆಗಳು ಹಾಗೂ ಆಪಾದಿತರ ಪರವಾಗಿ ಆಪಾದಿತರ ಹೇಳಿಕೆ, 2 ಸಾಕ್ಷಿ ಹಾಗೂ ಹಲವು ದಾಖಲೆಗಳನ್ನು ಪರಿಶೀಲಿಸಿ, ಅಂತಿಮವಾಗಿ ಸಲ್ಲಿಸಿರುವ ವರದಿಯಲ್ಲಿ ಆರೋಪಿತರ ವಿರುದ್ಧದ ಆರೋಪಗಳು ಸಾಭೀತಾಗಿರುತ್ತವೆ ಎಂದು ನಿರ್ಣಯಿಸಿರುತ್ತಾರೆ.

ವಿಚಾರಣಾ ವರದಿಗೆ ಪ್ರತಿಯಾಗಿ ಆಪಾದಿತರು ಸಲ್ಲಿಸಿರುವ ಲಿಖಿತ ವಿವರಣೆಯು ಒಂದೇ ರೀತಿ ಇರುವ ಕಾರಣ ಇಬ್ಬರು ಆಪಾದಿತರ ಲಿಖಿತ ಹೇಳಿಕೆಗಳಲ್ಲಿನ ಅಂಶಗಳ ಬಗ್ಗೆ ಒಟ್ಟಿಗೆ ಪರಿಶೀಲಿಸಲಾಗಿದೆ. ಆಪಾಧಿತರು ತಮ್ಮ ವಿವರಣೆಯಲ್ಲಿ ದೂರುದಾರರನ್ನು ಇಲಾಖಾ ವಿಚಾರಣೆ ಸಂದರ್ಭದಲ್ಲಿ ಪಿ.ಡಬ್ಲ್ಯೂ 1 ಎಂದು ಪರಿಗಣಿಸಿ ಅವರ ಹೇಳಿಕೆಯನ್ನು ಪಡೆದುಕೊಂಡಿದ್ದು ಸದರಿಯವರ ಹೇಳಿಕೆಯಲ್ಲಿನ ಅಂಶಗಳು

ಹಾಗೂ ಕಿರಿಯ ಇಂಜಿನಿಯರ್ ವಿ.ಮುರಳೀಧರ್ ರವರು ತಮಗೆ ಪರಿಚಯವಿಲ್ಲವೆಂದು, ಇಲಾಖಾ ವಿಚಾರಣೆಯಲ್ಲಿಯೇ ಅವರನ್ನು ಮೊದಲ ಬಾರಿಗೆ ನೋಡುತ್ತಿರುವುದಾಗಿ, ದೂರು ಅರ್ಜಿಯಲ್ಲಿ ಬಾಗಿಲು ಮತ್ತು ಕಿಟಕಿಗಳ ಬಗ್ಗೆ ಯಾವುದೇ ದೂರು ಸಲ್ಲಿಸಿರುವುದಿಲ್ಲವೆಂಬುದನ್ನು ಗುತ್ತಿಗೆದಾರರಾದ ಶ್ರೀ ಕರಿಯಪ್ಪ ಇವರನ್ನು ವಿಚಾರಣೆ ನಡೆಸಲಾಗಿಲ್ಲವೆಂಬ ಅಂಶವನ್ನು 2008-09 ನೇ ಸಾಲಿಗೆ 8,000/- ರೂ.ಗಳ ಅನುದಾನ ಲಭ್ಯವಿದ್ದರು ಸಹ 14,067/- ರೂ.ಗಳಿಗೆ ಅಂದಾಜನ್ನು ಏಕೆ ಮಂಜೂರು ಮಾಡಲಾಗಿತ್ತೆಂಬ ಬಗ್ಗೆ ಅಧ್ಯಕ್ಷರು ಅಥವಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರ ಹೇಳಿಕೆಯನ್ನು ಪಡೆದುಕೊಂಡಿಲ್ಲವೆಂದು, ಅನುದಾನದ ಕೊರತೆಯಿಂದಾಗಿ ಕಿಟಕಿ ಮತ್ತು ಬಾಗಿಲುಗಳ ಕೆಲಸವನ್ನು 2009-10 ನೇ ಸಾಲಿನಲ್ಲಿ ಮಾಡಲಾಗಿದೆ ಎಂದು, ಹಾಗಾಗಿ ಶಿಸ್ತು ಪ್ರಾಧಿಕಾರವು ಆರೋಪಗಳನ್ನು ಸಾಬೀತುಪಡಿಸಲು ವಿಫಲವಾಗಿರುತ್ತದೆಂದು, ಅಂಗನವಾಡಿ ಶಾಲೆಯ ಶಿಕ್ಷಕರ ಹೇಳಿಕೆಯನ್ನು ತನಿಖಾಧಿಕಾರಿಯವರು ಪಡೆದುಕೊಂಡಿಲ್ಲವೆಂದು, ಹಾಗಾಗಿ ವಿಚಾರಣಾಧಿಕಾರಿಯವರ ಅಭಿಪ್ರಾಯವು ಆಧಾರ ರಹಿತವಾಗಿರುವುದರಿಂದ ಅದನ್ನು ತಿರಸ್ಕರಿಸಿ ತಮ್ಮನ್ನು ಆರೋಪ ಮುಕ್ತಗೊಳಿಸಬೇಕೆಂದು ಕೋರಿದ್ದಾರೆ.

ಸರ್ಕಾರವು ಆರೋಪಿತರ ವಿವರಣೆಯನ್ನು ಪರಿಗಣಿಸಿರುತ್ತದೆ. ಶಾಂತಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಬ್ಬಿಮಠ ಬಾಚಾಳಿ ಗ್ರಾಮದಲ್ಲಿನ ಅಂಗನವಾಡಿ ದುರಸ್ತಿ ಕಾಮಗಾರಿಯನ್ನು 2008-09ನೇ ಸಾಲಿನಲ್ಲಿ ಹಾಗೂ 2009-10ನೇ ಸಾಲಿನಲ್ಲಿ ಎರಡು ಬಾರಿ ಕೈಗೊಳ್ಳಲಾಗಿದ್ದು. 2009-10ನೇ ಸಾಲಿನಲ್ಲಿ ಕೈಗೊಳ್ಳಲಾದ ಅಂಗನವಾಡಿ ರಿಪೇರಿ ಕಾಮಗಾರಿಯ ಬಿಲ್ಲನ್ನು ಪಾವತಿಸುವ ಸಂದರ್ಭದಲ್ಲಿ ಸದರಿ ಕಾಮಗಾರಿಯ ಎಂ.ಬಿ.ಪುಸ್ತಕದಲ್ಲಿ ಒಂದು ಬಾಗಿಲು ಹಾಗೂ ನಾಲ್ಕು ಕಿಟಕಿಗಳು ಎಂದು ನಮೂದಿಸಲಾಗಿದೆ. ಆದರೆ ತನಿಖಾಧಿಕಾರಿಯವರು ದಿ:04.11.2011 ರಂದು ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಒಂದು ಬಾಗಿಲು ಹಾಗೂ ಎರಡು ಕಿಟಕಿಗಳನ್ನು ಅಂಗನವಾಡಿ ಕಟ್ಟಡಕ್ಕೆ ನಿಗಧಿಪಡಿಸಲು 2007-08 ಮತ್ತು 2009-10 ನೇ ಸಾಲಿನಲ್ಲಿ ಎರಡು ಬಾರಿ ಅಂದಾಜು ಪಟ್ಟಿಯ ಅನುಮೋದನೆ ಪಡೆದುಕೊಂಡಿರುತ್ತಾರೆ. ಒಂದುವೇಳೆ 2007-08 ನೇ ಸಾಲಿನ ಅಂದಾಜು ಪಟ್ಟಿಯ ಅನುದಾನದ ಕೊರತೆ ಇದ್ದಲ್ಲಿ ಅದನ್ನೆ ಮುಂದುವರೆಸಿ ಬಾಕಿ ಹಣ ಪಾವತಿಸುವ ಕುರಿತು ಸಂಬಂಧಪಟ್ಟ ಆಪಾದಿತರು ಕ್ರಮವಹಿಸಬಹುದಾಗಿತ್ತು. ಆದರೆ ಮೊದಲನೇ ಬಾರಿ ಅಂದಾಜು ಪಟ್ಟಿ ಅನುಮೋದನೆ ಪಡೆದುಕೊಂಡ ನಂತರ ಅದನ್ನು ಅನುಷ್ಠಾನಗೊಳಿಸಿರುವ ಬಗ್ಗೆ ಅಳತೆ ಪುಸ್ತಕದಲ್ಲಿ ನಮೂದಿಸಿರುವುದು ಹಾಗೂ ಎರಡನೇ ಬಾರಿಯು ಸಹ ಅದೇ ಕಾಮಗಾರಿಗೆ ಅಂದಾಜು ಪಟ್ಟಿಯಲ್ಲಿ ಅಡಕಗೊಳಿಸಿ ಅನುಮೋದನೆ ಪಡೆದು ನಂತರ ಕಾಮಗಾರಿ ಅನುಷ್ಠಾನಗೊಳಿಸಿರುವ ಬಗ್ಗೆ ಅಳತೆ ಪುಸ್ತಕದಲ್ಲಿ ನಮೂದಿಸಿ ಹಣ ಪಾವತಿಸಿರುವುದರಿಂದ ಸಂಬಂಧಪಟ್ಟ ಆಪಾದಿತರುಗಳು ಒಂದೇ ಕಾಮಗಾರಿಗೆ ಎರಡು ಬಾರಿ ಹಣ ಪಾವತಿಸಿರುವುದು ಸ್ಪಷ್ಟವಾಗಿ ಸಾಬೀತಾಗಿರುತ್ತದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ 15,784/- ರೂ.ಗಳ ಹೆಚ್ಚುವರಿ ಹೊರೆಯಾಗಿರುವುದು ಕಂಡುಬರುತ್ತದೆ.

ಆದ್ದರಿಂದ, ಸದರಿ ವಿಷಯಕ್ಕೆ ಸಂಬಂಧಿಸಿದ ಆರೋಪವು ಸಾಬೀತಾಗಿರುತ್ತದೆಂದು ವಿಚಾರಣಾಧಿಕಾರಿಯವರು ನಿರ್ಣಯಕ್ಕೆ ಬಂದಿರುವುದು ಸಮಂಜಸವಾಗಿರುತ್ತದೆ. ಹಾಗಾಗಿ ಆಪಾದಿತರ ಲಿಖಿತ ಹೇಳಿಕೆಯಲ್ಲಿ ಪರಿಗಣನಾರ್ಹವಾದ ಯಾವುದೇ ಅಂಶಗಳು ಕಂಡುಬರುವುದಿಲ್ಲ.

ಆದ್ದರಿಂದ ವಿಚಾರಣಾಧಿಕಾರಿಯವರ ನಿರ್ಣಯವನ್ನು ತಳ್ಳಿ ಹಾಕಲು ಸೂಕ್ತ ಹಾಗೂ ಸಮಾಧಾನಕರ ಅಂಶಗಳು / ದಾಖಲೆಗಳು ಕಂಡು ಬರುವುದಿಲ್ಲವಾದ್ದರಿಂದ ವಿಚಾರಣಾಧಿಕಾರಿಯವರ ನಿರ್ಣಯವನ್ನು ಅಂಗೀಕರಿಸಿ, ಆರೋಪಿತ ನೌಕರರ ವಿರುದ್ಧ ಸಾಬೀತಾದ ಆರೋಪಗಳ ಗಂಭೀರತೆಗೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: 139 ಇಎನ್‌ಕ್ಯೂ 2016 ಬೆಂಗಳೂರು ದಿನಾಂಕ: 25-08-2018</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಮುರುಳಿಧರ ವಿ., ಹಿಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸೋಮವಾರಪೇಟೆ ಹಾಗೂ ಶ್ರೀ ಗಣಪತಿ.ಕೆ.ಪಿ., ಅಂದಿನ ಕಾರ್ಯದರ್ಶಿ, ಶಾಂತಳ್ಳಿ ಗ್ರಾಮ ಪಂಚಾಯತ್ ಇವರುಗಳಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು-1957ರ ನಿಯಮ-8 (iv-a) ರನ್ವಯ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ಹಂತವನ್ನು ಕೆಳಗಿಳಿಸುವ (reduction to a lower stage in the time scale) ದಂಡನೆಯನ್ನು ವಿಧಿಸಿ ಆದೇಶಿಸಿದೆ. ಈ ಅವಧಿಯಲ್ಲಿ ವಾರ್ಷಿಕ ವೇತನ ಬಡ್ತಿ ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ರಂಗನಗೌಡ) 25/8/2018
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
5. ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
6. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ಸರ್ಕಲ್, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, (ಸೇವೆಗಳು-ಎ&ಸಿ) ವಿಕಾಸಸೌಧ ಬೆಂಗಳೂರು.
9. ಸಂಬಂಧಪಟ್ಟ ಅಧಿಕಾರಿಗಳಿಗೆ
10. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
11. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.